**ಸಾಕ್ಷಿಯನ್ನು ದಿಃ 13.1.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 3 ರಿಂದ 5 ನೇ ಪ್ರತಿವಾದಿ ಪರ ಶ್ರೀ ಕೆ.ಎಸ್ ವಕೀಲರಿಂದಃ**

7 ಸ್ವತ್ತುಗಳ ಮೇಲೆ ನಾನು ಸದರಿ ದಾವೆಯನ್ನು ಹೂಡಿದ್ದೇನೆ. ದಾವಾ ಸ್ವತ್ತುಗಳು ಮೂಲತಃ ಮ್ಯಾಕಲಪ್ಪ ಉರುಫ್ ತಾಡಪ್ಪ ರವರಿಗೆ ಸೇರಿದ ಸ್ವತ್ತು. ಮ್ಯಾಕಲಪ್ಪ ಉರುಫ್ ತಾಡಪ್ಪ ನನ್ನ ತಾತ. ದಾವಾ ಸ್ವತ್ತುಗಳು ಮೂಲತಃ ಮ್ಯಾಕಲಪ್ಪ ಉರುಫ್ ತಾಡಪ್ಪ ರವರ ಹೆಸರಿನಲ್ಲಿ ಇತ್ತು ಎಂದು ತೋರಿಸಲು ಪಹಣಿ ಮತ್ತು ಇತರೆ ದಾಖಲಾತಿಗಳನ್ನು ನನ್ನ ವಕೀಲರ ಕಡೆಗೆ ಕೊಟ್ಟಿರುತ್ತೇನೆ. ಸದರಿಯವರಿಗೆ ಸಂಬಂಧಪಟ್ಟ ಸ್ವತ್ತುಗಳು ಎಂದು ತೋರಿಸಲು ನಾನು ಮಾನ್ಯ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಮ್ಯಾಕಲಪ್ಪ ಉರುಫ್ ತಾಡಪ್ಪ ಇವರಿಗೆ ವೆಂಕಟಪ್ಪ, ನಾಗಪ್ಪ, ತಾಡಪ್ಪ ಮತ್ತು ಚಿನ್ನಪ್ಪಜ್ಜ ಅಂತ 4 ಜನ ಮಕ್ಕಳು. ಸದರಿಯವರ ಹೆಸರುಗಳಲ್ಲಿ ಇರುವ ಪಹಣಿ ಪತ್ರಿಕೆಗಳನ್ನು ನಾನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಸದರಿ ಸಂಗತಿಯನ್ನು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪ್ರತಿವಾದಿ ನಂಃ3 ರಿಂದ 5 ರವರ ಹೆಸರುಗಳು ದಾವಾ ಸ್ವತ್ತು ಅನುಕ್ರಮ ಸಂಖ್ಯೆ 1, 2, 3, 4 ಮತ್ತು 6 ರ ಪಹಣಿ ಪತ್ರಿಕೆಯಲ್ಲಿರುವ ಕಾರಣ ಸದರಿಯವರು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ತಿದ್ದುಪಡಿ ಮಾಡಿ ತಮ್ಮ ಹೆಸರಿನಲ್ಲಿ ಮಾಡಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಏನು ತಿದ್ದುಪಡಿ ಮಾಡಿಕೊಂಡಿದ್ದಾರೆ ಎಂಬ ಪ್ರಶ್ನೆಗೆ ಅದರ ಬಗ್ಗೆ ನನಗೆ ಹೆಚ್ಚಿನ ಮಾಹಿತಿ ಇರುವುದಿಲ್ಲ ಎಂದು ನುಡಿಯುತ್ತಾರೆ. ದಾವಾ ಸ್ವತ್ತು ಅನುಕ್ರಮ ಸಂಖ್ಯೆ 1, 2, 3, 4 ಮತ್ತು 6 ರ ಸ್ವಾಧೀನ ಪಡೆದುಕೊಳ್ಳಲು ಯಾವುದೇ ಪರಿಹಾರವನ್ನು ಕೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾವೇ ಸ್ವಾಧೀನಾನುಭವದಲ್ಲಿ ಇದ್ದೇವೆ ಎಂದು ನುಡಿಯುತ್ತಾರೆ. ದಾವಾ ಆಸ್ತಿಗಳಿಗೆ ಸಂಬಂಧಪಟ್ಟ ಕಂದಾಯವನ್ನು ನಮ್ಮ ತಾತನವರು ಕಟ್ಟಿರುತ್ತಾರೆ, ನಾನು ಕಟ್ಟಿರುವುದಿಲ್ಲ. ನನ್ನ ತಾತನವರು ಕಂದಾಯ ಕಟ್ಟಿರುವ ಬಗ್ಗೆ ದಾಖಲಾತಿಗಳನ್ನು ನಾನು ನನ್ನ ವಕೀಲರ ಕಡೆಗೆ

ಕೊಟ್ಟಿರುತ್ತೇನೆ. ಪ್ರತಿವಾದಿ ನಂಃ3 ರಿಂದ 5 ರವರು ಏನು ತಕರಾರು ಹಾಕಿರುತ್ತಾರೆ ಹಾಗೂ ಯಾವ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದಾರೆ ಎಂದು ತಿಳಿದುಕೊಂಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿಯವರು ಯಾವ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ ಎಂಬ ಬಗ್ಗೆ ನಾನು ನನ್ನ ವಕೀಲರ ಬಳಿ ಕೇಳಿ ತಿಳಿದುಕೊಂಡಿದ್ದೇನೆ. ಪ್ರತಿವಾದಿ ನಂಃ3 ರಿಂದ 5 ರವರ ಹೆಸರಿನಲ್ಲಿರುವ ಕ್ರಯಪತ್ರದ ಪ್ರತಿಗಳನ್ನು ನಾನು ಸಬ್ ರಿಜಿಸ್ಟ್ರಾರ್ ಕಛೇರಿಯಿಂದ ಪಡೆದುಕೊಂಡಿರುವುದಿಲ್ಲ. ಪ್ರತಿವಾದಿ ನಂಃ3 ರಿಂದ 5 ರವರ ಪರ ಇರುವ ಕ್ರಯಪತ್ರಗಳು ಇದ್ದಾವೋ ಅಥವಾ ಇಲ್ಲವೋ ಎಂಬ ಬಗ್ಗೆ ವಿಚಾರಣೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ3 ರಿಂದ 5 ರವರ ಪರ ಹೆಸರಿನಲ್ಲಿ ಆಗಿರುವ ಮ್ಯುಟೇಷನ್ ಪ್ರತಿಯನ್ನು ತೆಗೆದುಕೊಂಡು ನಾನು ನನ್ನ ವಕೀಲರಿಗೆ ಕೊಟ್ಟಿದ್ದೇನೆ. ಇಲ್ಲಿಯವರೆಗೂ ಪ್ರತಿವಾದಿ ನಂಃ3 ರಿಂದ 5 ರವರ ಪರ ಆಗಿರುವ ಮ್ಯುಟೇಷನ್ ಪ್ರತಿಯನ್ನು ಕಂದಾಯ ನ್ಯಾಯಾಲಯದ ಮುಂದೆ ಪ್ರಶ್ನೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಸರ್ವೆ ನಂಃ22 ರ ಪೈಕಿ 2 ಎಕರೆಯನ್ನು ಪ್ರತಿವಾದಿ ನಂಃ4 ರವರ ತಂದೆಯಾದ ಚಿಕ್ಕಚೆನ್ನಪ್ಪ ಇವರು 28.7.1967 ರಲ್ಲಿ ಖರೀದಿ ಮಾಡಿಕೊಂಡಿರುವ ಕಾರಣದಿಂದಾಗಿ ನಾವು ಸದರಿಯವರನ್ನು ಈ ದಾವೆಯಲ್ಲಿ 4 ನೇ ಪ್ರತಿವಾದಿಯಾಗಿ ಮಾಡಿರುತ್ತೇವೆ ಎಂದರೆ ಸರಿ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಸದರಿ ದಾಖಲಾತಿಯು ದಿನಾಂಕ 28.7.1967 ರ ಕ್ರಯ ಪತ್ರವನ್ನು ತೋರಿಸಲಾಗಿ ಸದರಿ ಕ್ರಯಪತ್ರದ ಅಡಿಯಲ್ಲಿ ಪ್ರತಿವಾದಿ ನಂಃ4 ರವರ ತಂದೆಯವರು ಸರ್ವೆ ನಂಃ22 ರ ಪೈಕಿ 2 ಎಕರೆಯನ್ನು ಖರೀದಿ ಮಾಡಿದ್ದಾರೆ ಎಂದರೆ ಸಾಕ್ಷಿಯು ಸರ್ವೆ ನಂಃ22 ನಿಜವಾಗಿರುತ್ತದೆ ಆದರೆ ಇದು ಆ ದಾಖಲೆ ಆಗಿರುವುದಿಲ್ಲ ಎಂದು ನುಡಿಯುತ್ತಾರೆ. ದಿನಾಂಕ 19.3.1954 ರಂದು ಗುಟ್ಟೂರು ವೆಂಕಟಪ್ಪ ಇವರು ಪಟೇಲ್ ಮುನೇಗೌಡ ಇವರ ಕಡೆಯಿಂದ ಸರ್ವೆ ನಂಃ22 ರ ಪೈಕಿ 2 ಎಕರೆಯನ್ನು ಖರೀದಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಆಸ್ತಿಯಾದ ಸರ್ವೆ ನಂಃ21/2 ರ ಪೈಕಿ 2 ಎಕರೆ 5 ಗುಂಟೆಯನ್ನು ಪ್ರತಿವಾದಿ ನಂಃ4 ರವರ ತಂದೆಯು ದಿನಾಂಕ 7.2.1973 ರಂದು ವೆಂಕಟಪ್ಪ ಬಿನ್ ಮುನಿದಾಸಪ್ಪ ಎಂಬುವವರ ಕಡೆಯಿಂದ ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಇದೇ ಸರ್ವೆ ನಂಬರ್ ಪೈಕಿ 1 ಎಕರೆ 18 ಗುಂಟೆಯನ್ನು ವೆಂಕಟೇಶಪ್ಪ ಬಿನ್ ಮುನಿದಾಸಪ್ಪ ರವರು ಪಾಪಮ್ಮ ಇವರ ಕಡೆಯಿಂದ ದಿನಾಂಕ 27.11.1964 ರಂದು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಸರ್ವೆ ನಂಬರ್ ಪೈಕಿ ಈ ಮೇಲೆ ಹೇಳಿರುವ 1 ಎಕರೆ 18 ಗುಂಟೆಯನ್ನು ವೆಂಕಟೇಶಪ್ಪ ಬಿನ್ ಮುನಿದಾಸಪ್ಪ ರವರ ಕಡೆಯಿಂದ ಪ್ರತಿವಾದಿ ನಂಃ4 ರವರ ತಾಯಿಯಾದ ಮುನಿಯಮ್ಮ ಇವರು ಖರೀದಿ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿ ನಂಃ4 ರವರ ತಂದೆ ಹಾಗೂ ತಾಯಿಯಾದ ಚಿಕ್ಕಚೆನ್ನಪ್ಪ ಹಾಗೂ ಮುನಿಯಮ್ಮ ಇವರು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಸರ್ವೆ ನಂಃ21/2 ರ ಪೈಕಿ 1 ಎಕರೆ 13 ಗುಂಟೆಯನ್ನು ದಿನಾಂಕ 20.6.1984 ರಂದು ಪ್ರತಿವಾದಿ ನಂಃ4 ರವರ ತಂದೆಯಾದ ಚಿಕ್ಕಚೆನ್ನಪ್ಪ ಹಾಗೂ ಪ್ರತಿವಾದಿ ನಂಃ3 ರವರು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಈ ಖರೀದಿ ಪತ್ರದ ಬಗ್ಗೆ ನಾನು ತಿಳಿದುಕೊಂಡಿದ್ದೇನೆ. ಪ್ರತಿವಾದಿ ನಂಃ4 ರವರ ತಂದೆ ಹಾಗೂ ತಾಯಿ ತೀರಿಕೊಂಡ ನಂತರ ಈ ಮೇಲೆ ಹೇಳಿರುವ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿ ನಂಃ4 ರವರ ಹೆಸರು ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಮ್ಮ ಹೆಸರಿನಲ್ಲಿ ಬರುತ್ತಿತ್ತು ಎಂದು ನುಡಿಯುತ್ತಾರೆ. ಈಗಲೂ ಕೂಡಾ ಈ ಮೇಲೆ ಹೇಳಿರುವ ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳಲ್ಲಿ ಪ್ರತಿವಾದಿ ನಂಃ4 ರವರ ಹೆಸರು ಬರುತ್ತದೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಪಹಣಿ ಪತ್ರಿಕೆಗಳನ್ನು ಹಾಜರು ಪಡಿಸಿದ್ದು ಅವುಗಳಲ್ಲಿ ಪ್ರತಿವಾದಿ ನಂಃ4 ರವರ ಹೆಸರು ಇರುವುದು ಈಗ ನನಗೆ ನೆನಪಿಲ್ಲ. ಸದರಿ ಕ್ರಯಪತ್ರದ ಆಧಾರದ ಮೇಲೆ ಪ್ರತಿವಾದಿ ನಂಃ4 ರವರು ಈ ಮೇಲೆ ಹೇಳಿರುವ ದಾವಾ ಆಸ್ತಿಗಳ ಸ್ವಾಧೀನಾನುಭವದಲ್ಲಿ ಇದ್ದು ಹಾಗೂ ಈ ಆಸ್ತಿಗಳ ಪಹಣಿ ಪತ್ರಿಕೆಗಳು ಅವರ ಹೆಸರಿನಲ್ಲಿಯೇ ಬರುತ್ತಿರುವ ಕಾರಣದಿಂದಾಗಿ ನಾವು ಅವರನ್ನು ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಸದರಿಯವರು ನಮಗೆ

ತೊಂದರೆ ಕೊಡುತ್ತಿರುವ ಕಾರಣದಿಂದಾಗಿ ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿ ಸಂಗತಿಯನ್ನು ನಾನು ನನ್ನ ವಕೀಲರಿಗೆ ತಿಳಿಸಿರುತ್ತೇನೆ. ಪ್ರತಿವಾದಿ ನಂಃ4 ರವರು ದಾವಾ ಆಸ್ತಿಗೆ ಸಂಬಂಧಪಟ್ಟಂತೆ ನಮಗೆ ತೊಂದರೆ ಕೊಡುವ ಬಗ್ಗೆ ನಮ್ಮ ವಾದಪತ್ರದಲ್ಲಿ ನಮೂದು ಇರುವ ಬಗ್ಗೆ ಈಗ ನನಗೆ ನೆನಪಿರುವುದಿಲ್ಲ. ಸದರಿ ದಾವೆಯನ್ನು ನಾನು ಪ್ರತಿವಾದಿಯರು ತಿದ್ದುಪಡಿ ಮಾಡಿಕೊಂಡಿದ್ದು ಹಾಗೂ ಅವರು ನಮಗೆ ತೊಂದರೆ ಕೊಡುತ್ತಿದ್ದ ಕಾರಣದಿಂದಾಗಿ ಈ ದಾವೆಯನ್ನು ಹೂಡಿದ್ದೇನೆ. ನಮಗೆ ತಕರಾರು ಮಾಡಬಾರದು ಹಾಗೂ ನಮ್ಮ ಆಸ್ತಿ ನಮಗೆ ಸಿಗಬೇಕು ಎಂದು ಈ ದಾವೆಯನ್ನು ನಾನು ಪ್ರತಿವಾದಿಯರ ವಿರುದ್ಧ ಹೂಡಿದ್ದೇನೆ.

ಪ್ರತಿವಾದಿ ನಂಃ5 ರವರು ಕೂಡಾ ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ಸುಳ್ಳು ದಾಖಲಾತಿ ಮಾಡಿರುವ ಕಾರಣ ಸದರಿಯವರ ವಿರುದ್ಧ ಈ ದಾವೆಯನ್ನು ಹೂಡಿದ್ದೇನೆ. ಯಾವ ಸುಳ್ಳು ದಾಖಲಾತಿಗಳನ್ನು ಪ್ರತಿವಾದಿ ನಂಃ5 ರವರು ಮಾಡಿಕೊಂಡಿದ್ದಾರೆ ಎಂಬ ಪ್ರಶ್ನೆಗೆ ಸಾಕ್ಷಿಯು ನನಗೆ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಪ್ರತಿವಾದಿ ನಂಃ5 ರವರು ಹಾಕಿರುವ ತಕರಾರು ಹಾಗೂ ಹಾಜರು ಪಡಿಸಿರುವ ದಾಖಲಾತಿಗಳ ಬಗ್ಗೆ ನನಗೆ ನೆನಪಿರುವುದಿಲ್ಲ. ಸರ್ವೆ ನಂಃ22 ರ ಪೈಕಿ 2 ಎಕರೆ ಜಮೀನನ್ನು ಪ್ರತಿವಾದಿ ನಂಃ5 ರವರ ತಾತನಾದ ಮುನಿವೆಂಕಟಪ್ಪ ರವರು ವೆಂಕಟಪ್ಪ ಬಿನ್ ಕೊರಚರ ವೆಂಕಟಪ್ಪ ಇವರ ಕಡೆಯಿಂದ ದಿನಾಂಕ 24.5.1951 ರಂದು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರದ ಬಗ್ಗೆ ವಿಚಾರಣೆ ಮಾಡಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಾನು ಮಾಡಿರುವುದಿಲ್ಲ ಆದರೆ ನಮ್ಮ ತಂದೆಯವರು ಮಾಡಿರಬಹುದು ಎಂದು ನುಡಿಯುತ್ತಾರೆ. ಮುನಿವೆಂಕಟಪ್ಪ ಇವರ ಮಗನಾದ ಗಂಗಪ್ಪ ಇವರಿಬ್ಬರೂ ತೀರಿಕೊಂಡ ನಂತರ ಸದರಿ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿ ನಂಃ5 ರವರ ಹೆಸರು ಬರುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸದರಿಯವರು ಸುಳ್ಳು ದಾಖಲಾತಿಯನ್ನು ಮಾಡಿಕೊಂಡಿದ್ದಾರೆ ಎಂದು ನುಡಿಯುತ್ತಾರೆ.

ದಾವಾ ಆಸ್ತಿ ಸರ್ವೆ ನಂಃ21/1 ರ ಪೈಕಿ 33 ಗುಂಟೆಯನ್ನು ಪ್ರತಿವಾದಿ ನಂಃ5 ರವರ ತಂದೆಯಾದ ಗಂಗಪ್ಪ ಇವರು 11.3.1968 ರಂದು ಖರೀದಿ ಮಾಡಿಕೊಂಡಿದ್ದಾರೆ ಎಂದರೆ ನನಗೆ

ಗೊತ್ತಿಲ್ಲ. ಪ್ರತಿವಾದಿ ನಂ:5 ರವರ ತಂದೆಯಾದ ಗಂಗಪ್ಪ ಇವರು ತೀರಿಕೊಂಡ ನಂತರ ಪ್ರತಿವಾದಿ ನಂ:5 ರವರ ಹೆಸರು ಪಹಣಿ ಪತ್ರಿಕೆಗಳಲ್ಲಿ ಬರುತ್ತಿದ್ದು ಅವರೇ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಪಹಣಿಗಳು ನಮ್ಮ ತಾತನ ಹೆಸರಿನಲ್ಲಿ ಬರುತ್ತಿವೆ ಎಂದು ನುಡಿಯುತ್ತಾರೆ. ಈ ಮೇಲೆ ಹೇಳಿರುವ ಕ್ರಯಪತ್ರಗಳನ್ನು ನನ್ನ ತಾತನಾಗಲೀ ಅಥವಾ ಮುತ್ತಾತನಾಗಲೀ ಪ್ರಶ್ನೆ ಮಾಡಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಮೇಲೆ ಹೇಳಿರುವ ಆಸ್ತಿಗಳು ಈ ಮೊದಲು ಯಾರ ಹೆಸರಿನಲ್ಲಿದ್ದವು ಹಾಗೂ ಯಾರ ಹೆಸರಿಗೆ ಮಾರಾಟ ಮಾಡಿದ್ದಾರೆ ಅವರನ್ನೆಲ್ಲಾ ಸದರಿ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ಪ್ರತಿವಾದಿ ನಂ:3 ರಿಂದ 5 ರವರಿಗೆ ಸಂಬಂಧಪಟ್ಟ ಆಸ್ತಿಗಳನ್ನು ಪಡೆದುಕೊಳ್ಳಬೇಕೆಂಬ ದುರುದ್ದೇಶದಿಂದ ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ನಂ:3 ರಿಂದ 5 ರವರಿಗೆ ಸಂಬಂಧಪಟ್ಟ ಆಸ್ತಿಗಳಲ್ಲಿ ನನಗೆ ಯಾವುದೇ ರೀತಿ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ:</u> ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

**(ಸುಕೀತಾ ಎಸ್ ಹದ್ಲಿ)**
1 ನೇ ಅಪರ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಬಂಗಾರಪೇಟೆ